ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳು

1069 (1456) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) ಮಾನ್ಯ ಗ್ರಾಮಾಣಾಭಿವೃದ್ಧಿ. ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಡಿಯುವ ನೀರಿನ ಉದ್ದೇಶದಡಿಯಲ್ಲಿ ಸರ್ಕಾರವು ನಾರುಹುಣ್ಣು. ಫ್ಲೋರಿನ್ ಹೆಚ್ಚಿನ ಕಬ್ಬಿಣಾಂಶ. ರಸಾಯನಿಕ ಅಂಶಗಳು ಕಠಿಣಾತ್ಮಕ ಹಳ್ಳಿಗಳು ನೀರಿನ ಸಮಸ್ಯೆ ಇರುವ ಹಳ್ಳಿಗಳು ಇತ್ಯಾದಿ ಕಾರಣದಿಂದ ಸಮಸ್ಯಾತ್ಮಕ ಹಳ್ಳಿಗಳನ್ನುಗುರುತಿಸಲಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ. ಪಂಚಾಯತ್‌ರಾಜ್ ಹಾಗೂ ಕಂದಾಯ ಸಚಿವರು) :

ಅ) ಹೌದು.

ಮಿನಿಮಿಷನ್ ಯೋಜನೆಯಡಿಯಲ್ಲಿ 1987-88 ರ ಸಾಲಿನಲ್ಲಿ ಕೆಳಕಂಡ ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸಿದೆ.

ಕ್ರ ಸಂ.	ಜಿಲ್ಲೆ	ಕಠಿಣಾತ್ಮಕ ಹಳ್ಳಿಗಳು	ಸವಳು ನೀರಿನ ಹಳ್ಳಿಗಳು	ಹೆಚ್ಚಿನ ಫ್ಲೊರೈಡ್ ಅಂಶ ಇರುವ ಹಳ್ಳಿಗಳು	ನಾರುಹುಣ್ಣು ರೋಗಕ್ಕೆ ಈಡಾದ ಹಳ್ಳಿಗಳು	ಒಟ್ಟು
1	ಗುಲ್ಬರ್ಗಾ	115	110	25	108	358
2	ಧಾರವಾಡ	111	167	44	27	349
3	ರಾಯಚೂರು	51	121	43	-	215
	ಒಟ್ಟು	277	398	112	135	922

ಸಬ್ ಮಿಷನ್ ಯೋಜನೆಯಡಿಯಲ್ಲಿ(ನಾರುಹುಣ್ಣು ನಿರ್ಮೂಲನಾ ಕಾರ್ಯಕ್ರಮ ಈ ಕೆಳಕಂಡ ಹಳ್ಳಿಗಳನ್ನು ನಾರುಹುಣ್ಣು ರೋಗಕ್ಕೆ ಈಡಾದ ಹಳ್ಳಿಗಳೆಂದು 1.1.91ರಲ್ಲಿ ಗುರುತಿಸಲಾಗಿದೆ.

1) ಧಾರವಾಡ	1
2) ಬಿಜಾಪುರ	14
3) ಗುಲ್ಬರ್ಗಾ	90
4) ಬೀದರ್	2
5) ರಾಯಚೂರು	52
ಒಟ್ಟು	159

ಆ) ಕಬ್ಬಿಣಾತ್ಮಕ ಹಳ್ಳಿಗಳು. ಸವಳು ನೀರಿನ ಹಳ್ಳಿಗಳು :- ಈ ಹಳ್ಳಿಗಳಿಗೆ ಎಲ್ಲಾ ಕಾಲದಲ್ಲೂ ಶುದ್ಧವಾದ ಕುಡಿಯುವ ನೀರಿನ ಹೊಸ ಜಲಮೂಲವನ್ನು ಸ್ಥಾಪಿಸಲಾಗುತ್ತಿದೆ. ಅಂತ ಜಲಮೂಲವನ್ನು ಕಂಡುಹಿಡಿಯಲು ಭಾರತ ಸರ್ಕಾರದ ಕೇಂದ್ರ ಅಂರ್ತಜಲ ಮಂಡಳಿಯ ವತಿಯಿಂದ ಸೇವೆ ಹಾಗೂ ಸಲಹೆಗಳನ್ನು ಪಡೆಯಲಾಗುತ್ತಿದೆ.

ನೀರಿನಲ್ಲಿ ಹಚ್ಚಿನ ಫ್ಲೋರೈಡ್‌ಅಂಶ ಇರುವ ಹಳ್ಳಿಗಳು :-

ಈ ಗುರುತಿಸಲಾದ ಹಳ್ಳಿಗಳಿಗೆ ಬದಲಿ ಜಲಮೂಲವನ್ನು ಸ್ಥಾಪಿಸಲಾಗಿದೆ. ಬದಲಿ ಜಲಮೂಲವನ್ನು ಸ್ಥಾಪಿಸಲಾಗದ ಹಳ್ಳಿಗಳಿಗೆ ಡಿಫ್ಲೊರಿಡೇಷನ್ ಕಿಪ್ಲಾಂಟ್‌ಗಳನ್ನು ತೆಗೆದುಕೊಳ್ಳಲಾಗಿದೆ.

ನಾರು ಹುಣ್ಣಿಗೆ ಈಡಾದ ಹಳ್ಳಿಗಳು :-

ನಾರು ಹುಣ್ಣಿನ ರೋಗಕ್ಕೆ ಈಡಾದ ಹಳ್ಳಿಗಳಿಗೆ ಸುರಕ್ಷಿತ ನೀರನ್ನು ಒದಗಿಸಿ ರೋಗರಹಿತ ಮೆಟ್ಟಿಲು ಬಾವಿಗಳನ್ನು (ಕಲ್ಯಾಣಿ) ಸೇದುವ ಬಾವಿಗಳಾಗಿ ಪರಿವರ್ತಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಆಯವ್ಯಯ ಅನುದಾನ

1070 (1457) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೆ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ನಿಗದಿ ಪಡಿಸಿದ ಆಯವ್ಯಯ ಅನುದಾನವೆಷ್ಟು: (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ಹಣವನ್ನು ಯಾವ ರೀತಿ ಬಿಡುಗಡೆ ಮಾಡಲಾಗಿದೆ : (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಇ) ಅನುದಾನವನ್ನು ಉಪಯೋಗಿಸಿರದ ಬಗ್ಗೆ ಕಾರಣಗಳೇನು?

ಶ್ರೀ ಜಿ.ಹೆಚ್.ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಜಿಲ್ಲಾವಾರು ಅನುದಾನ ನಿಗದಿ ಪಡಿಸುವುದಿಲ್ಲ. 1991-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿರ್ದೇಶನ ಮತ್ತು ಆಡಳಿತ ಯಂತ್ರ ಮತ್ತು ಸಾಮಗ್ರಿ ಕಾಮಗಾರಿಗಳು. ಹಾಗೂ ಇತರೇ ವೆಚ್ಚಗಳಿಗೆ ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ ಕಟ್ಟಡಗಳ ಶೀರ್ಷಿಕೆಯಲ್ಲಿ 54.33 ಕೋಟಿ ರೂ.ಗಳನ್ನು ರಸ್ತೆ ಮತ್ತು ಸೇತುವೆಗಳ ಶೀರ್ಷಿಕೆಯಲ್ಲಿ ಒಟ್ಟಾರೆಯಾಗಿ 56.97 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಲೋಕೋಪಯೋಗಿ ಇಲಾಖೆ ವಿಭಾಗದ ಕಾಮಗಾರಿಗಳಿಗೆ ನೀಡಿರುವ ಅನುದಾನ ಹಾಗೂ ಬಿಡುಗಡೆಯಾಗಿರುವ ಅನುದಾನದ ವಿವರಗಳನ್ನು ಅನುಬಂದದಲ್ಲಿ ಕೊಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಪೂರ್ಣವಾಗಿ ಉಪಯೋಗಿಸಲಾಗುತ್ತದೆ. ಆದುದರಿಂದ ಅನುದಾನವನ್ನು ಉಪಯೋಗಿಸಿಲ್ಲದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.